ಶ್ರೀ ಎಚ್. ಎಸ್. ಸಿದ್ದಪ್ಪ.—ಯಾರಾದರೂ ಓರ್ ತೆಗೆಯುವುದಕ್ಕೆ ಲೈಸೆನ್ಸಿಗೆ ಅರ್ಜಿ ಹಾಕಿದಾಗ ಅವರಿಗೆ ನೇರವಾಗಿ ಲೈಸೆನ್ಸ್ ಕೊಡುತ್ತಿರೋ ಅಥವಾ ಸ್ಥಳ ಪರಿಶೀಲನೆ ಮಾಡಿ ಕೊಡುತ್ತೀರೋ ?

ಶ್ರೀ ಎಸ್. ಎಂ. ಕೃಷ್ಣ.—ಸರ್ಕಾರದವರೇ ಕೆಲವು ಪ್ರದೇಶಗಳನ್ನು ರಿಜರ್ವ್ಡ್ ಮಾಡಿಕೊಂಡಿರುತ್ತಾರೆ. ಇನ್ನು ಯಾರಾದರು ಅರ್ಜಿಗಳನ್ನು ಲೈಸೆನ್ಸಿಗಾಗಿ ಹಾಕಿಕೊಂಡಿದ್ದಾಗ ಅವರಿಗೆ ಪ್ರಾಸ್ಪೆಕ್ಟೀವ್ ಲೈಸೆನ್ಸ್ ಎಂದು ಕೊಡುತ್ತೇವೆ. ಅವರು ಅಲ್ಲಿ ಹೋಗಿ ನೋಡಿ ಅಂದಾಜು ಎಷ್ಟು ಸಿಕ್ಕಬಹುದು ಎಂಬುದನ್ನು ನೋಡಿಕೊಂಡು ಬಂದ ನಂತರ ಅವರಿಗೆ ಅಲ್ಲಿ ಅಗತ್ಯವಿದೆ ಎಂದರೆ ಆ ಲೀಜನ್ನು ಅವರಿಗೆ ಫಾರ್ಮಲ್ಲಾಗಿ ಮಂಜೂರು ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಮಾತ್ರವಲ್ಲದೆ ಹಿಕಾರಿಪುರ, ಸೊರಬ ಮುಂತಾದ ಕಡೆಗಳಲ್ಲೂ ಮ್ಯಾಂಗನೀಸ್ ಅದರು ದೊರೆಯುವುದು ಆದುದರಿಂದ ಅದನ್ನು ಉಪಯೋಗ ಮಾಡಿಕೊಳ್ಳಲು ಆ ಪ್ರದೇಶದಲ್ಲಿ ಒಂದು ಕಾರ್ಖಾನೆ ತರೆಯುವುದನ್ನು ಪರಿಶೀಲಿಸುವಿರಾ?

ಶ್ರೀ ಎಸ್. ಎಂ ಕೃಷ್ಣ :—ಸರಕಾರ ನೇರವಾಗಿ ಕಾರ್ಖಾನೆಯನ್ನು ಸ್ಥಾಪಿಸುವುದು ಬಹಳ ಕಷ್ಟ ಸಾಧ್ಯವಾದ ಕೆಲಸ ನಾನು ಅಶ್ವಾಸನೆ ಕೊಟ್ಟಿರುವ ಹಾಗೆ ಖಾಸಗಿ ಜನರು ಯಾರಾರೂ ಮುಂದೆ ಬಂದು ಪ್ರೈವೇಟ್ ಸೆಕ್ಟಾರಿನಲ್ಲಾಗಲೀ ಅಥವಾ ಜಾಯಿಂಟ್ ಸೆಕ್ಟಾರಿನಲ್ಲಾಗಲಿ ಕಾರ್ಖಾನೆ ತೆರೆಯುವುದಾದರೆ ನಾವು ಸಹಾಯ ಮಾಡುತ್ತೇವೆ.

ಶ್ರೀ ಕೋನಂಡೂರು ಲಿಂಗಪ್ಪ.—ಒಂದು ಕೋಟಿ ರೂಪಾಯಿಗಳಲ್ಲಿ ಕಾರ್ಖಾನೆ ಸ್ಥಾಪಿಸುವ ಯೋಜನೆ ವಿಚಾರವನ್ನು ಪತ್ರಿಕೆಯಲ್ಲಿ ನೋಡಿದೆ ಅದರಂತೆ ಸರಕಾರವೇ ಶಿವಮೊಗ್ಗ ಜಿಲ್ಲೆಯಲ್ಲಿ ಕೊಡಚಾದ್ರಿಯ ಬಳಿ ಏಕೆ ಎಂದು ಕಾರ್ಖಾನೆ ಸ್ಥಾಪಿಸಬಾರದು? ಮೈಸೂರಿನ ಮ್ಯಾಂಗನೀಸ್ ಅದುರು ಉಪಯೋಗ ಮಾಡುವುದು ಲಾಭದಾಯಕವೆಂದು ಮೈಸೂರು ಮಿನರಲ್ಸ್ ಲಿಮಿಟೆಡ್ ನವರು ಹೇಳುವಾಗ ಖಾಸಗಿಯವರಿಗೆ ಬಿಡದೆ ಸರಕಾರವೇ ಒಂದು ಕಾರ್ಖಾನೆ ಸ್ಥಾಪಿಸಿ ಲಾಭ ಪಡೆಯಲು ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ :—ಮೈಸೂರು ಮಿನರಲ್ಸ್ ಲಿಮಿಟೆಡ್ ನವರು ಮೈನ್ ಮಾಡುವರು. ಕಾರ್ಖಾನೆಯನ್ನು ಬೇರೆ ಸಂಸ್ಥೆಯ ಆಶ್ರಯದಲ್ಲಿ ಸ್ಥಾಪಿಸಬೇಕಾಗುವುದು. ಒಂದು ಕೋಟಿ ರೂಪಾಯಿ ಎಂಬುದು ಬಹಳ ದೊಡ್ಡ ಹಣ. ನಮ್ಮ ಸರಕಾರ ನೇರವಾಗಿ ಒಂದು ಕೋಟಿ ರೂಪಾಯಿ ಹಾಕಲು ಬಹಳ ಕಷ್ಟ. ಒಂದು ಕೋಟಿ ರೂಪಾಯಿ ದೊರೆತರೆ ಸ್ಥಾಪಿಸಬಹುದು. ಸಂಪನ್ಮೂಲ ಅನುಕೂಲವಾದಾಗ ಈ ವಿಚಾರ ಸರಕಾರ ಪರಿಶೀಲಿಸುವುದು.

SUPPLY OF TRACTORS TO AGRICULTURISTS

564. Sri S. Kariappa (Kanakapura).—

Will the Minister for Agriculture and Forests be pleased to state.

(*a*) the number of applications received for the supply of tractors for agricultural purposes during the past three years in the State (Yearwise information);

(*b*) the number of tractors supplied to the Agriculturists :

(i) on hire purchase system

(ii) on cash purchase system

(*c*) the variety and number of tractors supplied;

(*d*) the number of each make and the cost of each tractor;

(*e*) whether it has come to the notice of Government that the

FORGUSON tractor's company is not acting up to the terms of supply;

(*f*) the names of other companies, if any, which have been doing the same thing;

(*g*) the action they intend to take against such companies?

SRI K. H. PATIL (Minister for Agriculture and Forests)

(*a*)

1969-70	...	1,212
1970-71	...	1,398
1971-72	...	832
	Total	3,442

(*b*) 1,595
(i) 524
(ii) 1,071

(*c*)

MF. 1035	...	345
MF. 135	...	5
IMT. 555	...	6
B275 35 HP	...	1,035
B 276 37.5 HP	...	16
Hindustan 35 HP	...	29
Escort 37	...	137

(*d*)

		Rs. p.
MF. 1035	...	24,190 00
MF. 135	...	40,425-00
IMT. 555	...	26,751-20
B275	...	25,200-00
B276	...	27,928-25
Hindustan 35 HP	...	24,100-00
Hindustan 50 HP	...	32,900-00
Escort 37	...	27,316-48

(*e*) No.

(*f*) No complaints in respect of other companies have been received so far.

(*g*) Does not arise.

ಶ್ರೀ ಎಸ್. ಕರಿಯಪ್ಪ.—(ಬಿ) ಪ್ರಶ್ನೆಗೆ ಉತ್ತರವಾಗಿ ೧,೫೯೫ ಟ್ರಾಕ್ಟರುಗಳನ್ನು ಸರಬರಾಜು ಮಾಡಿದೆಯೆಂದು ಹೇಳಿದೆ. ಎಷ್ಟು ಅವಧಿಯಲ್ಲಿ ಅಷ್ಟನ್ನು ಸರಬರಾಯಿ ಮಾಡಲಾಗಿದೆ ?

† ಶ್ರೀ ಕೆ. ಎಚ್. ಪಾಟೀಲ್.—೧೯೭೧ ರಿಂದ ೧೯೭೨ ರವರೆಗೆ.

ಶ್ರೀ ಎಸ್. ಕರಿಯಪ್ಪ.—ಈಗ ಒಂದೆರಡು ವರ್ಷಗಳಿಂದ ಹೈರ್ ಪರ್ಚೇಸ್ ಸಿಸ್ಟಂ ಮೇಲೆ ಟ್ರಾಕ್ಟರನ್ನು ಕೊಡುವುದಕ್ಕಾಗುವುದಿಲ್ಲ, ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಅಪ್ಲಿಕೇಷನ್ ಹಾಕಿದವರಿಗೆ ಈ ರೀತಿ ಜವಾಬು ಬರುತ್ತಿದೆ. ಈಗ ಆ ಪರಿಸ್ಥಿತಿ ಬದಲಾವಣೆಯಾಗಿದೆಯೋ ಅಥವ ಹಾಗೆಯೇ ಇದೆಯೋ ?

ಶ್ರೀ ಕೆ. ಎಚ್. ಪಾಟೀಲ್.—ಈಗ ಆ ರೀತಿ ಇಲ್ಲ. ಹಿಂದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ನೇರವಾಗಿ ಸಾಲ ಕೊಡಬಹುದಾಗಿತ್ತು. ಈಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಕೊಡುವ ವ್ಯವಸ್ಥೆ ಮಾಡಲಾಗಿದೆ. ಬಂದ ಅರ್ಜಿಗಳಲ್ಲಿ ವಿಲೇ ಆಗಿವೆ, ೧೫ ದಿವಸಗಳಲ್ಲಿ ಕೇಳಿದವರಿಗೆಲ್ಲಾ ಕೊಟ್ಟು, ೩೦ ಟ್ರಾಕ್ಟರುಗಳು ಹೆಚ್ಚಾಗಿ ಉಳಿದಿವೆ.

ಶ್ರೀ ಬಾಪೂಗೌಡ ರಾಯಪ್ಪ—(ಎ) ಪ್ರಶ್ನೆಗೆ ಉತ್ತರವಾಗಿ ಟ್ರಾಕ್ಟರುಗಳ ಸರಬರಾಜಿಗೆ ೧೯೭೧—೭೨ರಲ್ಲಿ ೮೩೨ ಅರ್ಜಿಗಳು ಬಂದಿದ್ದುವು ಎಂದೂ ತಿಳಿಸಲಾಗಿದೆ. ಈ ಲೆಕ್ಕದ ಪ್ರಕಾರ ಟ್ರಾಕ್ಟರುಗಳನ್ನು ಖರೀದಿ ಮಾಡಲು ಜನರು ಮುಂದೆ ಹೆಚ್ಚಾಗಿ ಬರುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಪ್ರಶ್ನೆಗೆ ಉತ್ತರ ಕೊಟ್ಟ ತಾರೀಖಿನವರೆಗೆ ಆ ಸಂಖ್ಯೆ ನಮೂದಾಗಿದೆ. ನಂತರ ಬೇಕಾದಷ್ಟು ಅರ್ಜಿಗಳು ಬಂದು ಎಲ್ಲರಿಗೂ ಟ್ರಾಕ್ಟರನ್ನು ಕೊಡುವ ವ್ಯವಸ್ಥೆಮಾಡಿದೆ.

ಶ್ರೀ ಟಿ. ಎಂ. ಮಂಜುನಾಥ.—ಈಗ ಫರ್ಗೂಸನ್ ಕಂಪೆನಿಯಿಂದ ಪಡೆದ ಟ್ರಾಕ್ಟರುಗಳಿಗೆ ಹೆಚ್ಚು ಹಣ ಪಾವತಿಮಾಡಿದ್ದಾರೆ. ಎಷ್ಟು ದಿವಸಗಳಲ್ಲಿ ಅದನ್ನು ಕಂಪೆನಿಯಿಂದ ವಾಪಸು ಕೊಡಿಸುತ್ತೀರಿ?

ಶ್ರೀ ಕೆ. ಹೆಚ್. ಪಾಟೀಲ್.—ಫರ್ಗೂಸನ್ ಟ್ರಾಕ್ಟರಿನ ವಿಚಾರದಲ್ಲಿ ಸರಕಾರ ನಿಯಂತ್ರಣ ಮಾಡಂವುದಿಲ್ಲ. ಪರರಾಷ್ಟ್ರದಿಂದ ಬಂದ ಟ್ರಾಕ್ಟರುಗಳನ್ನು ಮಾತ್ರ ೪೫ ಎಚ್‌ಪಿ ಗಿಂತ ಹೆಚ್ಚಾಗಿರುವುದನ್ನು ಒಂದು ವರ್ಷ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಖರೀದಿಮಾಡಿದೆ. ಈ ವಿಚಾರದಲ್ಲಿ ತನಿಖೆ ನಡೆಯುತ್ತಿದೆ. ಕೇಂದ್ರ ಸರಕಾರದಿಂದ ಕೊಡಲು ಆಜ್ಞೆಯಾಗಬೇಕು. ಅವರು ಆರ್ಡರು ಮಾಡಿದನಂತರ ನಾವು ಅಪ್ಪಣೆ ಕೊಡುತ್ತೇವೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಭೂ ಸುಧಾರಣೆ ಜಾರಿಗೆ ಬಂದಾಗ ಟ್ರಾಕ್ಟರು ಉಪಯೋಗ ಬಾಗುವುದಿಲ್ಲ. ಆದುದರಿಂದ ಆಗ ಅದನ್ನು ವಾಪಸು ಪಡೆಯುತ್ತೀರೋ ಅಥವ ಸಾಲ ವಜಾ ಮಾಡುತ್ತೀರೋ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

SUPPLY OF MEDICINES, ETC., TO VETERINARY HOSPITALS

624 SRI GATTI CHNDRASHEKAR (Gubbi).—

Will the Minister of State for Animal Husbandry be pleased to state.—

(*a*) whether it has come to the notice of Government that the required medicine is not being supplied to veterinary hospitals in the State.

(*b*) whether it has come to their notice that instruments supplied to various hospitals 20-30 years ago have become useless and that no instruments are supplied recently.

(*c*) whether it has come to their notice that the amount sanctioned to this Department is being lapsed and any action is taken by them to solve this problem.

(*d*) whether it has come to their notice that the medicine amounting to 3 lakhs of rupees, purchased from the only company viz I.C.I. Company last year is being wasted without any use.